ಕೊಡುವುದರಲ್ಲಿಯೇ ಇದ್ದಾರೆ. ರಾಜ್ಯದ ಬಗ್ಗೆ ನಿಮಗಿರುವ ಚಿಂತನೆ ಏನು? ಪ್ರತಿಮೆಯನ್ನು ಸ್ಥಾಪಿಸುವುದಕ್ಕೆ ನಾಲ್ಕು ವರ್ಷಗಳ ಮುಂಚೆ ಅಲ್ಲಿನ ಮುಖ್ಯಮಂತ್ರಿಗಳನ್ನು ಮರಾಠಾ ಮಂಡಳಿಯವರು ಕೇಳಿದರು. ಆ ರೀತಿ ಕೇಳಿದವರು ಕನ್ನಡಿಗರಲ್ಲ. ಈ ರಾಜ್ಯದ ಮರಾಠಾ ಮಂಡಳಿಯವರು ತಮ್ಮ ಪ್ರಭುತ್ವವನ್ನು ಬೆಳೆಸುವುದಕ್ಕೋಸ್ಕರ ಇಲ್ಲೊಂದು ಶಿವಾಜಿ ಪ್ರತಿಮೆ ಸ್ಥಾಪಿಸಬೇಕೆಂದು ಹೊರಟಾಗ ನೀವು ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಹೇಳಬೇಕಾಗಿತ್ತು. ಏನೆಂದರೆ, ಕರ್ನಾಟಕದ ಇತಿಹಾಸ ಪುರುಷರು ಯಾರಿದ್ದಾರೆ, ಅವರು ರಾಣಿ ಕಿತ್ತೂರು ಚೆನ್ನಮ್ಮ ಆಗಿರಬಹುದು, ಯಾರೇ ಆಗಿರಬಹುದು. ಮೊದಲು ಅವರ ಪ್ರತಿಮೆಯನ್ನು ನೀವು ಅಲ್ಲಿ ಸ್ಥಾಪಿಸುತ್ತೀರಾ? ಎಂದು ಕೇಳಿ ಅದಕ್ಕೆ ಅವರು ಒಪ್ಪಿದಾಗ ಶಿವಾಜಿ ಪ್ರತಿಮೆಯನ್ನು ಇಲ್ಲಿ ಸ್ಥಾಪಿಸಬೇಕಾಗಿತ್ತೇ ಹೊರತು, ಇಲ್ಲಿ ಪ್ರತಿಮೆಯನ್ನು ಸ್ಥಾಪಿಸಿದರೆ ಜನರು ಪ್ರತಿಭಟಿಸಲು ಬರುತ್ತಾರೆಂದು ರಾತ್ರೋರಾತ್ರಿ ಆ ಪ್ರತಿಮೆಯನ್ನು ಉದ್ಘಾಟಿಸುವ ಪಿತೂರಿ ನಡೆಯಿತು. ಈ ಬಗ್ಗೆ ಎರಡು ಬಾರಿ ಸದನದ ಒಳಗೆ ಮತ್ತು ಹೊರಗಡೆ ಉಪದೇಶ ಕೊಟ್ಟಿದ್ದಾಯಿತು. ನಾವು ಕೇವಲ ಉಪದೇಶಗಳನ್ನು ಕೊಡುವುಷ್ಟರ ಮಟ್ಟಕ್ಕೆ ತಲುಪಿದ್ದೇವೆ. ರಾಷ್ಟ್ರಾಭಿಮಾನ ಇರಬೇಕು, ನಿಜ. ರಾಷ್ಟ್ರದ ಬಗ್ಗೆ ನಾನೆಂದಿಗೂ ವಿರೋಧ ಮಾಡಿದವನಲ್ಲ, ರಾಷ್ಟ್ರದ ಬಗ್ಗೆ ನನಗೆ ಅಪಾರವಾದ ಗೌರವವಿದೆ, ರಾಷ್ಟ್ರಕ್ಕಾಗಿ ನನ್ನ ರಕ್ತವನ್ನೂ ಸಹ ಕೊಡಲು ಸಿದ್ಧನಾಗಿದ್ದೇನೆ. ಆ ಪ್ರಶ್ನೆ ಬೇರೆ. ಆದರೆ, ಇವೊತ್ತು ಈ ನಾಡಿನ ಪರಿಸ್ಥಿತಿ ಏನಾಗಿದೆ? ನಾವು ದಿನೇ ದಿನೇ ತಬ್ಬಲಿಗಳಾಗುತ್ತಿದ್ದೇವೆ, ನಾವುಗಳು ದುರಂತಕ್ಕೆ ಸಿಲುಕಿದ್ದೇವೆ, ಕರ್ನಾಟಕದ ಪರಿಸ್ಥಿತಿ ಅತ್ಯಂತ ದುರಂತಮಯವಾಗಿದೆ. ಉಪದೇಶ ಕೊಡತಕ್ಕಂಥವರು ನಮ್ಮಲ್ಲಿ ಬಹಳ ಜನರಿದ್ದಾರೆ. ಈ ಭಾರತ ದೇಶದಲ್ಲಿ ಉಪದೇಶ ಕೊಡತಕ್ಕಂಥವವರು ಯಾರಾದರೂ ಇದ್ದರೆ ಅದು ಕನ್ನಡಿಗರು ಮಾತ್ರ, ಇದು ದುರ್ದೈವದ ಸಂಗತಿಯಾಗಿದೆ. ಆದುದರಿಂದ, ಇವೊತ್ತು ನೀವು ಇದರ ಬಗ್ಗೆ ಸುದೀರ್ಘವಾಗಿ ಮಾತನಾಡಿ ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದಾಗಿ ಏನು ಹೇಳಿದ್ದೀರಿ, ಅವರ ಪ್ರತಿಮೆಯನ್ನು ಸ್ಥಾಪಿಸಬೇಕಾದರೆ ಯಾರ ಅಪ್ಪಣೆಯೂ ಬೇಕಾಗಿಲ್ಲ. ಇದೇ ಒಂದು ಗಟ್ಟಿತನದಲ್ಲಿ ಮಹಾರಾಷ್ಟ್ರ ಶಾಸನ ಸಭೆಯಲ್ಲಿ ಆಗಲಿ, ಮಹಾರಾಷ್ಟ್ರದಲ್ಲಾಗಲಿ ಶ್ರೀಮಾನ್ ಶರದ್ಪವಾರ್‌ರವರು ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಹಾಕಿಯೇ ಹಾಕುತ್ತೇವೆಂದು ಹೇಳಲಿಲ್ಲ ಎಂದೂ ಹೇಳಿಲ್ಲ. ವಿಶ್ವೇಶ್ವರಯ್ಯನವರ ಬಗ್ಗೆ ಮಾತನಾಡುತ್ತೀರಿ. ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಅವರು ಪ್ರೀತಿಗೋಸ್ಕರ ಹಾಕಲಿಲ್ಲ. ವಿಶ್ವೇಶ್ವರಯ್ಯನವರು ಅಲ್ಲಿ ತ್ಯಾಗ ಮಾಡಿದ್ದಾರೆ. ಅವರ ರಾಜ್ಯದಲ್ಲಿಯೂ ವಿಶ್ವೇಶ್ವರಯ್ಯನವರು ಕೆಲಸ ಮಾಡಿದ್ದಾರೆ. ಅವರು ಇಂಜಿನಿಯರ್‌ಗಾಗಿ ಆ ರಾಜ್ಯಕ್ಕೆ ಕೊಟ್ಟಂಥ ಕೊಡುಗೆಗೋಸ್ಕರ ಅವರ ಪ್ರತಿಮೆಯನ್ನು ಹಾಕಿದ್ದಾರೆಯೇ ಹೊರತು ಸುಮ್ಮನೆ ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಅಲ್ಲಿ ಹಾಕಲಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ, ತಮ್ಮ ಈ ಉಪದೇಶ ಬೇಡ. ನಿಮ್ಮ ಬಗ್ಗೆ ನನಗೆ ಬಹಳ ಗೌರವವಿದೆ. ಆದರೆ ತಮ್ಮ ಈ ನೀತಿ ಏನಿದೆ, ಇದು ನಿಜವಾಗಲೂ ದೇವರ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ, ಇದರಿಂದ ನನಗೆ ಬಹಳ ವೇದನೆಯಾಗಿದೆ. ನಮ್ಮ ಕರ್ನಾಟಕ ತಬ್ಬಲಿಯಾಗುತ್ತಿದೆ. ನಮ್ಮ ಕರ್ನಾಟಕವನ್ನು ಕಡೆಗಣಿಸಿದ್ದೀರಿ, ಕರ್ನಾಟಕ ಮಲತಾಯಿ ರೀತಿಯಲ್ಲಿದೆ ಎನ್ನತಕ್ಕ ನೋವಿನಿಂದ ನಾನು ಹೇಳುತ್ತಿದ್ದೇನೆ. ನಾನೆಷ್ಟೇ ಹೇಳಿದರೂ ನೀವು ಅದನ್ನು ಒಪ್ಪುವ ಮಟ್ಟದಲ್ಲಿಲ್ಲ. ಮತ್ತು ನಿಮ್ಮ ಉಪದೇಶ ಇದ್ದೇ ಇರುತ್ತದೆ. ನನಗಾಗಿರುವ ಆ ಒಂದು ಸಂಕಟದಿಂದ, ನೋವಿನಿಂದ ನನಗೆ ಈ ಸಭೆಯಲ್ಲಿ ಕುಳಿತುಕೊಳ್ಳಲು ನೋವಾಗಿದೆ, ಆದ್ದರಿಂದ ನಾನು ಈ ಸಭೆಯಿಂದ ಹೊರಗಡೆ ಹೋಗುತ್ತಿದ್ದೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)